# ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಸಿಬ್ಬಂದಿ-2/ಉ.ನೇ/ನಿ.ಉ.ಮುಂ/275/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-560012,
ದಿನಾಂಕ: 9-01 -2015

## ಸುತ್ತೋಲೆ

**ವಿಷಯ:**- ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಉಪನ್ಯಾಸಕರನ್ನು ಮರಳ ತಾತ್ಕಾಲಿಕವಾಗಿ ಕರ್ತವ್ಯದಲ್ಲಿ ಮುಂದುವರೆಸಿ ಕ.ನಾ.ಸೇ.ನಿಯಮ 313(ಬಿ)ರ ಅಡಿ ವೇತನ ನಿಗಧಿ ಪಡಿಸುವ ಬಗ್ಗೆ.

**ಉಲ್ಲೇಖ:**-1. ಸರ್ಕಾರದ ಆದೇಶ ಸಂಖ್ಯೆ ಇಡಿ 64 ಎಸ್‌ಟಿಬಿ 2013, ಬೆಂಗಳೂರು, ದಿನಾಂಕ: 25-06-2014.

2. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಪತ್ರಗಳು.

-*-

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ 2014-15ನೇ ಸಾಲಿನ ಶೈಕ್ಷಣಿಕ ವರ್ಷದ ಜೂನ್ 2014ರ ಮಾಹೆಯಿಂದ ಮಾರ್ಚ್ 2015ರ ವರೆಗೆ ವಯೋನಿವೃತ್ತರಾಗಲಿರುವ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರನ್ನು ಏಪ್ರಿಲ್ 2015ರ ವರೆಗೆ ಸೇವೆಯಲ್ಲಿ ಮುಂದುವರೆಸಲು ಉಲ್ಲೇಖ-1ರ ಸರ್ಕಾರದ ಆದೇಶದಲ್ಲಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿದೆ:

1. ಈ ರೀತಿ ನೇಮಕಗೊಂಡವರಿಗೆ ಕ.ನಾ.ಸೇ.ನಿಯಮಗಳ ನಿಯಮ 313(ಬಿ) ಪ್ರಕಾರ ವೇತನವನ್ನು ನಿಗಧಿಪಡಿಸತಕ್ಕದ್ದು;
2. ಶೈಕ್ಷಣಿಕ ವರ್ಷದ ಪ್ರಾರಂಭದ ನಂತರ, ಅಂದರೆ **ಜೂನ್ ತಿಂಗಳ ನಂತರ ಫೆಬ್ರವರಿ ತಿಂಗಳ ಅಂತ್ಯದವರೆಗೆ ನಿವೃತ್ತರಾಗುವ ಶಿಕ್ಷಕರು/ಉಪನ್ಯಾಸಕರಿಗೆ** (ಮಾರ್ಚ್ ತಿಂಗಳವರೆಗೆ ಕಾರ್ಯನಿರ್ವಹಿಸಲು) ಮಾತ್ರ ಇದನ್ನಯ ಅನ್ವಯವಾಗತಕ್ಕದ್ದು';
3. ಒಂದು ವೇಳೆ ನೇಮಕಾತಿ ಪ್ರಕ್ರಿಯೆಯು ಅಂತಿಮಗೊಂಡು ಹೊಸ ಉಪನ್ಯಾಸಕರು ನೇಮಕಗೊಂಡಲ್ಲಿ ಇಂತಹ ನೇಮಕಾತಿ ತಾನೇತಾನಾಗಿ ರದ್ದುಗೊಳ್ಳುತ್ತದೆ;
4. ಉಪನ್ಯಾಸಕರ ಕಾರ್ಯಭಾರ ಇರುವ ಹುದ್ದೆಯವರು ಮಾತ್ರ ಮುಂದುವರೆಸತಕ್ಕದ್ದು ಹಾಗೂ ತಾಲ್ಲೂಕಿನಲ್ಲಿ ಹೆಚ್ಚುವರಿ ಉಪನ್ಯಾಸಕರು ಲಭ್ಯವಿಲ್ಲವೆಂಬ ಬಗ್ಗೆ ಜಿಲ್ಲಾ ಉಪನಿರ್ದೇಶಕರು ದೃಢೀಕರಿಸಿದ ನಂತರವಷ್ಟೆ ಅನುಮತಿಸತಕ್ಕದ್ದು.

ಸದರಿ ಆದೇಶದಂತೆ, ಜೂನ್ 2014ರ ನಂತರ ವಯೋನಿವೃತ್ತಿ ಹೊಂದಿದ ಉಪನ್ಯಾಸಕರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ಅನುಮತಿಸುವಂತೆ ಕೋರಿ ಪ್ರಾಚಾರ್ಯರುಗಳು ವಯೋನಿವೃತ್ತಿ ಹೊಂದಿದ ಉಪನ್ಯಾಸಕರುಗಳ ವಿವರಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ. ಆದರೆ, ಸದರಿ ಸರ್ಕಾರಿ ಆದೇಶವು ಸ್ವಯಂವೇದ್ಯವಾಗಿರುತ್ತದೆ(self explanatory). ಆದ್ದರಿಂದ, ಸದರಿ ಆದೇಶದಂತೆ ಕ್ರಮಕೈಗೊಳ್ಳಲು ಪ್ರಾಚಾರ್ಯರುಗಳಿಗೆ ಸೂಚಿಸಿದೆ. ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮ 313(ಬಿ)ರಂತೆ ಸದರಿ ಉಪನ್ಯಾಸಕರುಗಳ ವೇತನ ನಿಗಧಿಪಡಿಸಬೇಕಾಗುವುದರಿಂದ ಈ ಕೆಳಕಂಡ ಮಾಹಿತಿಯನ್ನೊಳಗೊಂಡ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ:

1. ಉಪನ್ಯಾಸಕರ ಹೆಸರು, ಬೋಧನಾ ವಿಷಯ, ಕಾಲೇಜು ವಿವರ.
2. ವಯೋನಿವೃತ್ತಿ ಹೊಂದಿದ ದಿನಾಂಕ
3. ಮರು ನೇಮಕಾತಿಯ ನಂತರ ಕರ್ತವ್ಯಕ್ಕೆ ಹಾಜರು ಪಡಿಸಿಕೊಂಡ ದಿನಾಂಕ
4. ಅಂತಿಮ ವೇತನ ಪ್ರಮಾಣ ಪತ್ರದ ಪ್ರತಿ.
5. ಮಹಾಲೇಖಪಾಲರು ಪಿಂಚಣಿ ನಿಗಧಿಪಡಿಸಿದ ಪ್ರತಿ.
6. ಮರುನೇಮಕಾತಿಯ ನಂತರ ಕರ್ತವ್ಯಕ್ಕೆ ತೆಗೆದುಕೊಂಡ ವಿಷಯದಲ್ಲಿ ಜಿಲ್ಲೆಯಲ್ಲಿ ನಿಯೋಜನೆಗೆ ಅವಕಾಶವಿಲ್ಲದ ಪ್ರಯುಕ್ತ ನೇಮಕ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಉಪನಿರ್ದೇಶಕರ ದೃಢೀಕರಣ ಪತ್ರ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರುಗಳ ಮಾಹಿತಿಗಾಗಿ
2. ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪಪೂಶಿಇ, ಬೆಂಗಳೂರು.
4. ಕಛೇರಿ ಪ್ರತಿ.